**<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹುಕ್ಕೇರಿ</u>**

**ಸಿಸಿ ನಂ ಃ 181/2021**
**ಸಿಡಬ್ಲ್ಯು ಃ 3**
**ಪಿಡಬ್ಲ್ಯು ಃ 3**

**ಹೆಸರು** ಃ ಬಸಪ್ಪ ಗಂಗಪ್ಪ ಕುಫಣಿ
**ವಯಾ** ಃ 32 ವರ್ಷ
**ಉದ್ಯೋಗ** ಃ ಕೂಲಿ
**ವಾಸ** ಃ ಪಣಗುತ್ತಿ

**(ದಿನಾಂಕಃ 20-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು)**

**<u>ಮುಖ್ಯ ವಿಚಾರಣೆ ಃ ಸಸಅಃರವರಿಂದ ಸರಕಾರದ ಪರವಾಗಿ ಃ</u>**

ಚಾಸಾ.2 ರವರ ಪರಿಚಯವಿರುವುದಿಲ್ಲ. ಈ ಪ್ರಕರಣದ ವಿಚಾರವಾಗಿ ನನಗೆ ಯಾವುದೇ ಮಾಹಿತಿ ಇಲ್ಲ. ಸೆಪ್ಟಂಬರ 2014 ರಲ್ಲಿ ಯಮಕನಮರಡಿ ಬಸ ಸ್ಟಾಂಡ ಹತ್ತಿರ ಪೋಲಿಸರು ದಾಖಲಾತಿಗಳ ಮೇಲೆ ನನ್ನ ಸಹಿ ಪಡೆದಿರುತ್ತಾರೆ. ಸಾಕ್ಷಿಗೆ ಪಂಚನಾಮೆಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ.1 ಎಂದು ಗುರುತಿಸಲಾಗಿದ್ದು, ಸಹಿಯನ್ನು ನಿ.ಪಿ.1(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಮಾದರಿ ಸಹಿಗಳ ಚೀಟಿಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ.3 ಎಂದು ಗುರುತಿಸಲಾಗಿದ್ದು, ಸಹಿಯನ್ನು ನಿ.ಪಿ.3(ಸಿ) ಎಂದು ಗುರುತಿಸಲಾಯಿತು. ಅದರಲ್ಲಿರುವ ವಿಚಾರ ಓದಿ ಹೇಳಿಲ್ಲ. ನನ್ನ ಸಮಕ್ಷಮ ಯಾವುದೇ ದಾಳಿ ಮಾಡಿಲ್ಲ ಮಧ್ಯವನ್ನು ವಶಪಡಿಸಿಕೊಂಡಿಲ್ಲ. ನನನ್ನು ಎಲ್ಲಿಗೂ ಕರೆದುಕೊಂಡು ಹೋಗಿರುವುದಿಲ್ಲ.

( ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಸಅರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)

**<u>ಪಾಟಿ ಸವಾಲುಃ ಮಾನ್ಯ ಎಪಿಪಿ ಅವರಿಂದ</u>**

ದಿನಾಂಕ 06-09-2014 ರಂದು ಮಧ್ಯಾಹ್ನ 02.00 ಗಂಟೆ ಸುಮಾರಿಗೆ ಚಾಸಾ.4 ರವರು ನನ್ನನ್ನು ಮತ್ತು ಚಾಸಾ.2 ಇವರನ್ನು ಠಾಣೆಗೆ ಕರೆಸಿ ಅಲ್ಲಿ ಅವರಿಗೆ ಬಂದಂತಹ ಮಾಹಿತಿಯನ್ನು ತಿಳಿಸಿ ನಮ್ಮನ್ನು ಪಂಚರನ್ನಾಗಿ ಸಹಕರಿಸುವಂತೆ ಕೋರಿದರು ಎಂದರೆ ಸರಿಯಲ್ಲ. ನಂತರ ನಾವು ಮತ್ತು ಪೊಲಿಸರ ಜೊತೆ ಬಾತ್ಮಿ ಇದ್ದ ಸ್ಥಳಕ್ಕೆ ಹೋಗಿರುತ್ತೇವೆ ಎಂದರೆ ಸರಿಯಲ್ಲ. ಅಲ್ಲಿ ಒಬ್ಬ ವ್ಯಕ್ತಿ ಟ್ಯೂಬಿನಲ್ಲಿ ಸಾರಾಯಿ ತೆಗೆದುಕೊಂಡು ಹೋಗುತ್ತಿದ್ದದ್ದು ಕಂಡುಬಂತು ಎಂದರೆ ಸರಿಯಲ್ಲ.

ಆತನು ನಮ್ಮನ್ನು ನೋಡಿ ಟ್ಯೂಬನ್ನು ಅಲ್ಲೇ ಬಿಸಾಗಿ ಓಡಿ ಹೋಗಿರುತ್ತಾನೆ ಎಂದರೆ ಸರಿಯಲ್ಲ. ಚಾಸಾ.5 ಮತ್ತು 6 ರವರು ಹಿಡಿಯಲು ಪ್ರಯತ್ನಿಸಿದ್ದು ಆತ ಸಿಕ್ಕಿರುವುದಿಲ್ಲ ಎಂದರೆ ಸರಿಯಲ್ಲ.

ನಂತರ ಸಿಬ್ಬಂದಿಗಳು ವಾಪಸ ಬಂದು ಆರೋಪಿಯ ಹೆಸರು ಈರಪ್ಪ ರೋಣಿ ಸಾಃ ರಾಜಕಟ್ಟಿ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಟ್ಯೂಬನ್ನು ಪರಿಶೀಲಸಿ ನೋಡಲಾಗಿ ಘಾಟ ವಾಸನೆ ಕಂಡುಬಂದಿದ್ದು , ಅದರಲ್ಲಿ 25 ಲೀಟರಿನಷ್ಟು ಕಳ್ಳಭಟ್ಟಿ ಸಾರಾಯಿ ಇರುವುದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ಇದು ಕಳ್ಳಭಟ್ಟಿ ಸಾರಾಯಿ ಸಾಗಾಟ ಪ್ರಕರಣ ಎಂದು ಪಂಚರಿಗೆ ತಿಳಿಸಿ ಸಿಕ್ಕಂತಹ ಮುದ್ದೆಮಾಲಿನಿಂದ ಸ್ಯಾಂಪಲಗಾಗಿ 180 ಮಿಲಿಯ ಸಾರಾಯಿ ಬಾಟಲಿಯಲ್ಲಿ ತೆಗೆದು ಬಿಳಿ ಬಟ್ಟೆ ಸುತ್ತಿ ಅರಗಿನಿಂದ ಶೀಲು ಮಾಡಲಾಯಿತು ಎಂದರೆ ಸರಿಯಲ್ಲ. ಮಾದರಿ ಚೀಟಿಗಳ ಮೇಲೆ ನಮ್ಮಗಳ ಸಹಿಗಳನ್ನು ಪಡೆಯಲಾಯಿತು ಎಂದರೆ ಸರಿಯಲ್ಲ. ಪಂಚನಾಮೆಯನ್ನು 16.00 ರಿಂದ 17.00 ಗಂಟೆಯವರೆಗೆ ಸ್ಥಳದಲ್ಲಿ ಬರೆದು ಮುಗಿಸಲಾಯಿತು ಎಂದರೆ ಸರಿಯಲ್ಲ. ನಂತರ ಸಿಕ್ಕಂತಹ ಮುದ್ದೆಮಾಲು ತೆಗೆದುಕೊಂಡು ಕಛೇರಿಗೆ ಬಂದು ಸರಕಾರದ ಪರವಾಗಿ ಚಾಸಾ.1 ರವರು ಪಿರ್ಯಾದನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

ನಿ.ಪಿ.1 ಮತ್ತು 3 ರಲ್ಲಿ ಬರೆದಿರುವ ವಿಚಾರ ಗೊತ್ತಿದ್ದರೂ ಸಹ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ ಶ್ರೀ ಆರೋಪಿತರ ಪರ ವಕೀಲರಿಂದ -

ಇರುವುದಿಲ್ಲ.

**ಮರುವಿಚಾರಣೆ ಇಲ್ಲ**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೆ ಕೇ ಸರಿ ಅದೇ**

**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**